ತಾನಾಗಿ ಹೊಳೆಯುತ್ತದೆ. ಜೀವನದಲ್ಲಿ ನಾವು ಹೇರಿಕೊಳ್ಳುವ ಪೂರ್ವಗ್ರಹಗಳ ಮೂಟೆಯೇ ನಮ್ಮತನಕ್ಕೆ ಅಂಟಿಕೊಂಡಿರುವ ದೂಳು; ಅದನ್ನೇ 'ಅವಿದ್ಯೆ' ಎಂದು ಕರೆಯುವುದು. ಹೇಗೆ ಹೆಂಚನ್ನು ಉಜ್ಜಿ ಉಜ್ಜಿ ದರ್ಪಣವನ್ನಾಗಿಸಲು ಸಾಧ್ಯವಿಲ್ಲವೋ ಹಾಗೆಯೇ ಏನೇನೋ ಸಾಧನೆಗಳನ್ನು ಮಾಡಿ ಮಾಡಿ ನಮ್ಮತನವನ್ನು ನಾವು ಪಡೆಯಲಾಗದು. 'ನಾನು ಇದ್ದೇನೆ' ಎಂಬ ಅರಿವಿಗೆ ಬೇರೊಬ್ಬರ ಪ್ರಮಾಣಪತ್ರವಾದರೂ ಏಕೆ ಬೇಕು, ಅಲ್ಲವೆ?

ಜೀವನದ ಯಾವ ಕೆಲಸವನ್ನೂ ಝೆನ್ ಎಂದಿಗೂ ಕನಿಷ್ಠವನ್ನಾಗಿ ನೋಡುವುದಿಲ್ಲ; ಪ್ರತಿಯೊಂದು ನಮ್ಮ ಭಂಗಿಯನ್ನೂ ಅದು ಸಾಧನೆಯ ಅಂಗವಾಗಿಯೇ ಪರಿಗಣಿಸುತ್ತದೆ. ಬದುಕಿನ ಯಾವ ಕ್ಷಣವನ್ನೂ ಅದು ವ್ಯರ್ಥವೆಂದೋ ಅರ್ಥವಿಲ್ಲದ್ದೆಂದೋ ತಿರಸ್ಕರಿಸದು; ಒಂದೊಂದು ಕ್ಷಣವನ್ನೂ ಅದು ಬುದ್ಧತ್ವ ಎಂಬ ಆನಂದಾನುಭವದ ಅರಿವಿನ ಕಣವನ್ನಾಗಿಯೇ ಸ್ವೀಕರಿಸುತ್ತದೆ. ನಮ್ಮ ಬದುಕೇ ಬುದ್ಧತ್ವದ ಹೆಜ್ಜೆಗಳು.

★★★

## ಸಕ್ಕರೆಯ ಸಿಹಿಗೆ ಶಬ್ದದ ಕಹಿ

ಅದು ಝೆನ್‌ಗುರು ನನ್‌ಸೆನ್‌ನ ಆಶ್ರಮ. ಅವನ ಶಿಷ್ಯನೊಬ್ಬ ಒಂದು ಅವನಲ್ಲಿಗೆ ಬಂದ. 'ಗುರುಗಳೇ! ಯಾವ ಗುರುವೂ ಇದುವರೆಗೂ ಉಪದೇಶಿಸದೇ ಇರುವ ಯಾವುದದಾರೂ ಬೋಧೆಯುಂಟೆ? – ಎಂದು ಕೇಳಿದ.

'ಉಂಟು!' – ಗುರು ನನ್‌ಸೆನ್ ಉತ್ತರಿಸಿದ.

'ಯಾವುದು ಗುರುಗಳೇ?' – ಕುತೂಹಲದಿಂದ ಶಿಷ್ಯ ಪ್ರಶ್ನಿಸಿದ.

ಗುರುಗಳು ಉತ್ತರಿಸಿದರು: 'ಬುದ್ಧ ಅಲ್ಲ; ವಸ್ತು ಅಲ್ಲ; ಚಿಂತನೆ ಅಲ್ಲ; ಇದೇ ಆ ಬೋಧೆ.'

★★★

ಈ ಕತೆಯನ್ನು ಓದಿದಾಗ ಚಂದ್ರಶೇಖರಭಾರತೀ ಮಹಾಸ್ವಾಮಿಗಳ ಮಾತೊಂದು ನೆನಪಾಗುತ್ತದೆ; ಅವರು 'ಅವಧೂತ' ಎಂದೇ ಪ್ರಸಿದ್ಧರಾಗಿದ್ದವರು. ಅವರನ್ನೊಮ್ಮೆ ಯಾರೋ ಜಿಜ್ಞಾಸುವೊಬ್ಬರು ಅದ್ವೈತಾನುಭವದ ಬಗ್ಗೆ ಕೇಳಿದಾಗ ಸ್ವಾಮಿಗಳು ಹೇಳಿದರಂತೆ: ''ಅಹಂ ಬ್ರಹ್ಮಾಸ್ಮಿ'' – ಎಂದು ಹೇಳುವುದರಿಂದಷ್ಟೆ ಅದ್ವೈತಾನುಭವ ಆಗದು' ಎಂದಿದ್ದರಂತೆ. ಈ ಮಾತಿಗೂ ಮೇಲಿನ ಕತೆಗೂ ಸಂಬಂಧವಿದೆ.

ನಮ್ಮ ಅನುಭವಗಳನ್ನು ನಾವು ಉಪಯೋಗಿಸುವ ಪದಗಳು ಕಟ್ಟಿಹಾಕುತ್ತಿರುತ್ತವೆ. ಯಾವುದೋ ಒಂದು ವಸ್ತುವನ್ನು ನೋಡುತ್ತೇವೆ. 'ಅದು ಚೆನ್ನಾಗಿದೆ' ಎನ್ನುತ್ತೇವೆ. 'ಚೆನ್ನಾಗಿದೆ' ಎಂದರೇನು–ಎಂದು ಎಂದಾದರೂ ಯೋಚಿಸಿದ್ದೇವೆಯೆ? ಈ ಪ್ರಶ್ನೆ 'ಚೆನ್ನಾಗಿಲ್ಲ' ಎನ್ನುವುದಕ್ಕೂ ಸಲ್ಲುತ್ತದೆ; ಅಷ್ಟೇಕೆ, ನಾವು ಹೀಗೆ ಗುಣವಿಶೇಷಣಗಳನ್ನೋ ಮೌಲ್ಯವನ್ನೋ ಆರೋಪಿಸಿ ಬಳಸುವ ಎಲ್ಲ ಶಬ್ದಗಳಿಗೂ ಮಾತುಗಳಿಗೂ ಸಲ್ಲತ್ತವೆಯೆನ್ನಿ! ನಾವು ಬಳಸುವ ಶಬ್ದ ಅದು ಪ್ರತಿನಿಧಿಸುವ ವಸ್ತುವನ್ನು ಸಂಕೇತಿಸುತ್ತದೆಯೋ ವಿನಾ ಅದೇ ಆ ವಸ್ತು ಆಗದಲ್ಲವೆ? ಉದಾಹರಣೆಗೆ, 'ಸಕ್ಕರೆ' ಎಂಬ ಪದವಿದೆ; ಅದು 'ಸಕ್ಕರೆ' ಎಂಬ ಆಹಾರದ ವಸ್ತುವೊಂದವನ್ನು ಪ್ರತಿನಿಧಿಸುತ್ತದೆ. ಆ ಆಹಾರದ ವಸ್ತುವು ಬಿಳಿಯಾಗಿರುತ್ತದೆ; ಸಣ್ಣ ಸಣ್ಣ ಹರಳಿನ ರೂಪದಲ್ಲಿರುತ್ತದೆ; ಅದನ್ನು ನಾಲಿಗೆಯ ಮೇಲಿಟ್ಟುಕೊಂಡರೆ ಕರಗುತ್ತದೆ ಕರಗುತ್ತಿರುವಂತೆಯೇ ಅದು ರುಚಿಯೊಂದನ್ನು ಒದಗಿಸುತ್ತದೆ; ಆ ರುಚಿಯನ್ನೇ 'ಸಿಹಿ' ಎಂದು ಮತ್ತೊಂದು ಪದದ ಮೂಲಕ ಹೇಳುತ್ತೇವೆ; ಆ ಸಿಹಿ ಎಂಬ ಗುಣ ನಮಗೆ ಇಷ್ಟವಾಗುತ್ತದೆ.